**2ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿಜೆಎಮ್ , ಮಂಗಳೂರು ದ.ಕ.**
**ಸಿಸಿ ನಂ.112/2023**

ಪಿಡಬ್ಲ್ಯು - 6
ಸಿಡಬ್ಲ್ಯು - 7

ದಿನಾಂಕಃ 19.02.2026
ರಂದು ಪ್ರಮಾಣ ವಚನ
ಬೋಧಿಸಲಾಯಿತು.

| | | |
|---|---|---|
| ಹೆಸರು | : | ಲೋರೆನ್ಸ್ ಡಿಸೋಜ |
| ತಂದೆಯ ಹೆಸರು | : | ದಿಃ ಗ್ರೆಗೊರಿ ಡಿಸೋಜ |
| ಪ್ರಾಯ | : | 67 ವರ್ಷ |
| ಉದ್ಯೋಗ | : | ಕೃಷಿ |
| ವಾಸ | : | ಮಂಗಳೂರು |

**ಮುಖ್ಯ ವಿಚಾರಣೆಃ ಮಾನ್ಯ ಹಿ.ಸ.ಸ.ಅ. ರವರಿಂದಃ**

ದಿಃ 22.09.2022 ರಂದು ಮಂಗಳೂರು ಪೂರ್ವ ಪೊಲೀಸರು ನನ್ನನ್ನು ಠಾಣೆಗೆ ಕರೆಯಿಸಿದ್ದು, ಅಲ್ಲಿಂದ ಪೊಲೀಸರು ನನ್ನನ್ನು ಮತ್ತು ಚಾಸಾ.6 ರವರನ್ನು ಹಾಗೂ 3 ಜನ ಆರೋಪಿತರು ಉರ್ವ ಸ್ಟೋರ್ ನ PWD Quarters ಗೆ ಕರೆದುಕೊಂಡು ಹೋಗಿದ್ದು, ಅಲ್ಲಿ ಮನೆ ನಂ. 159 ರ ಪಕ್ಕದಲ್ಲಿ 2ನೇ ಆರೋಪಿ ನೀಲಿ ಬಣ್ಣದ Rain coat ತೋರಿಸಿರುತ್ತಾನೆ. ಆ ಸಮಯದಲ್ಲಿ ಪೊಲೀಸರು ಒಂದು ಫೋಟೋ ತೆಗೆದಿರುತ್ತಾರೆ. ಅಲ್ಲಿ ಪೊಲೀಸರು ಬೆಳಿಗ್ಗೆ 11.50 ರಿಂದ 12.50 ರ ನಡುವೆ ಮಹಜರು ಬರೆದಿರುತ್ತಾರೆ. ಆ rain coat ನ್ನು ನೋಡಿದರೆ ಗುರುತಿಸುತ್ತೇನೆ. ಅದನ್ನು ನೋಡುತ್ತಿದ್ದು, ಈಗಾಗಲೇ ಮು.ಮಾ.1 ಎಂದು ಗುರುತಿಸಲಾಗಿದೆ. ಸಾಕ್ಷಿಗೆ ಒಂದು ದಾಖಲೆ ತೋರಿಸಲಾಗಿ, ಅದರಲ್ಲಿ ಅವರು ಸಹಿಯನ್ನು ಗುರುತಿಸಿದ್ದು, ಸದರಿ ದಾಖಲೆ ದಿಃ22.09.2022 ರ ಪಂಚನಾಮೆಯಾಗಿದ್ದು, ಅದನ್ನು ಈಗಾಗಲೇ ನಿ.ಪಿ.17 ಎಂದು ಗುರುತಿಸಲಾಗಿದೆ, ಅದರಲ್ಲಿರುವ **ಸಾಕ್ಷಿ ಸಹಿಯನ್ನು ನಿ.ಪಿ.17(ಬಿ)** ಎಂದು ಗುರುತಿಸಲಾಯಿತು.

2. ನಂತರ ಅದೇ ದಿನ 3 ಜನ ಆರೋಪಿತರು ಮಂಗಳೂರಿನ ಪದವಿನಂಗಡಿಗೆ ಕರೆದುಕೊಂಡು ಹೋಗಿದ್ದು, ಅಲ್ಲಿ ಆರೋಪಿತರು ಕುಳಿತಿದ್ದ ಸ್ಥಳವನ್ನು ತೋರಿಸಿದರು. ಆ ಸ್ಥಳದಲ್ಲಿ ಪೊಲೀಸರು ಒಂದು ಪಂಚನಾಮೆಯನ್ನು ಮದ್ಯಾಹ್ನ 1.20 ರಿಂದ 2.00 ಗಂಟೆ ನಡುವೆ ಬರೆದಿರುತ್ತಾರೆ. ಸಾಕ್ಷಿಗೆ ಒಂದು ದಾಖಲೆ ತೋರಿಸಲಾಗಿ, ಅದರಲ್ಲಿ ಅವರು ಸಹಿಯನ್ನು ಗುರುತಿಸಿದ್ದು, ಸದರಿ ದಾಖಲೆ ದಿಃ22.09.2022 ರ

ಪಂಚನಾಮೆಯಾಗಿದ್ದು, ಅದನ್ನು ಈಗಾಗಲೇ ನಿ.ಪಿ.18 ಎಂದು ಗುರುತಿಸಲಾದೆ. ಅದರಲ್ಲಿರುವ **ಸಾಕ್ಷಿ ಸಹಿಯನ್ನು ನಿ.ಪಿ.18(ಬಿ) ಎಂದು ಗುರುತಿಸಲಾಯಿತು.**

3. ನಂತರ ಅದೇ ದಿನ 3 ಜನ ಆರೋಪಿತರು ಮಂಗಳೂರಿನ ಎವರೆಸ್ಟ್ ಪ್ಲಾಸ್ಟಿಕ್ ಪ್ಯಾಕ್ಟರಿ ಬಳಿ ಕರೆದುಕೊಂಡು ಹೋಗಿದ್ದು, ಆ ಜಾಗದಲ್ಲಿ ಪೊಲೀಸರು ಒಂದು ಫೋಟೋ ತೆಗೆದಿದ್ದು, ಆ ಸ್ಥಳದಲ್ಲಿ ಪೊಲೀಸರು ಒಂದು ಪಂಚನಾಮೆಯನ್ನು ಮದ್ಯಾಹ್ನ 2.00 ರಿಂದ 3.00 ಗಂಟೆ ನಡುವೆ ಬರೆದಿರುತ್ತಾರೆ. ಸಾಕ್ಷಿಗೆ ಒಂದು ದಾಖಲೆ ತೋರಿಸಲಾಗಿ, ಅದರಲ್ಲಿ ಅವರು ಸಹಿಯನ್ನು ಗುರುತಿಸಿದ್ದು, ಸದರಿ ದಾಖಲೆ ದಿ:22.09.2022 ರ ಪಂಚನಾಮೆಯಾಗಿದ್ದು, ಅದನ್ನು ಈಗಾಗಲೇ **ನಿ.ಪಿ.19 ಎಂದು ಗುರುತಿಸಲಾಯಿತು. ಸಾಕ್ಷಿ ಸಹಿಯನ್ನು ನಿ.ಪಿ.19(ಬಿ) ಎಂದು ಗುರುತಿಸಲಾಯಿತು.**

4. ನಂತರ ಅದೇ ದಿನ 3 ಜನ ಆರೋಪಿತರು ಮಂಗಳೂರಿನ ಎವರೆಸ್ಟ್ ಪ್ಲಾಸ್ಟಿಕ್ ಪ್ಯಾಕ್ಟರಿ ಹತ್ತಿರ ಇರುವ Shallom ಎಂಬ ಮನೆಯ ಹತ್ತಿರ ಕರೆದುಕೊಂಡು ಹೋಗಿದ್ದು, ಆ ಸ್ಥಳದಲ್ಲಿ ಪೊಲೀಸರು ಒಂದು ಪಂಚನಾಮೆಯನ್ನು ಮದ್ಯಾಹ್ನ 3.20 ರಿಂದ 3.45 ಗಂಟೆ ನಡುವೆ ಬರೆದಿರುತ್ತಾರೆ. ಸಾಕ್ಷಿಗೆ ಒಂದು ದಾಖಲೆ ತೋರಿಸಲಾಗಿ, ಅದರಲ್ಲಿ ಅವರು ಸಹಿಯನ್ನು ಗುರುತಿಸಿದ್ದು, ಸದರಿ ದಾಖಲೆ ದಿ:22.09.2022 ರ ಪಂಚನಾಮೆಯಾಗಿದ್ದು, ಅದನ್ನು ಈಗಾಗಲೇ **ನಿ.ಪಿ.20 ಎಂದು ಗುರುತಿಸಲಾಯಿತು. ಸಾಕ್ಷಿ ಸಹಿಯನ್ನು ನಿ.ಪಿ.20(ಬಿ) ಎಂದು ಗುರುತಿಸಲಾಯಿತು.** ಸಾಕ್ಷಿಗೆ 3 ಫೋಟೋಗಳನ್ನು ತೋರಿಸಲಾಗಿ ಅವುಗಳನ್ನು ಪಂಚನಾಮೆ ಮಾಡುವ ಕಾಲಕ್ಕೆ ತೆಗೆದ ಫೋಟೋಗಳು ಎಂದು ನುಡಿಯುತ್ತಾರೆ. ಸದರಿ ಫೋಟೋಗಳನ್ನು ಈಗಾಗಲೇ ನಿ.ಪಿ.21 ರಿಂದ 23 ಎಂದು ಗುರುತಿಸಲಾಯಿತು. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. ನ್ಯಾಯಾಲಯದ ಮುಂದಿರುವ 1 ಮತ್ತು 3 ನೇ ಆರೋಪಿತರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. 2ನೇ ಆರೋಪಿ ಮರಣ ಹೊಂದಿರುತ್ತಾರೆ.

<u>ಪಾಟೀಸವಾಲು: **1ನೇ** ಆರೋಪಿ ಪರ **SPA** ವಕೀಲರಿಂದ:</u>

ಚಾಸಾ.1 ರವರು ನನ್ನ ಮನೆಯ ಹತ್ತಿರ ಇರುತ್ತಾರೆ. ನಮ್ಮ ಮನೆಯ ಹತ್ತಿರ 60 ಮನೆಗಳಿದ್ದು, ಆ ಮನೆಗಳಿಗೆ ನಾನು ನಾಯಕನಾಗಿರುತ್ತೇನೆ. ನಿ.ಪಿ.17 ರಿಂದ 20 ಪಂಚನಾಮೆ ಮಾಡುವ ಪೂರ್ವದಲ್ಲಿ ನನಗೆ ಈ ಪ್ರಕರಣದ ಬಗ್ಗೆ ಮಾಹಿತಿ ಇತ್ತು. ಈ

ಪ್ರಕರಣದ ಕಳ್ಳತನ ಆಗಿದೆ ಎಂದು ಹೇಳಲಾದ ಸ್ಥಳ ನನಗೆ ನಿ.ಪಿ.17 ರಿಂದ 20 ಮಾಡುವ ಪೂರ್ವದಲ್ಲಿ ಗೊತ್ತಿತ್ತು. ನಿ.ಪಿ.19 ಮತ್ತು 20 ಪಂಚನಾಮೆಯಲ್ಲಿ ನಮೂದು ಆಗಿರುವ ಸ್ಥಳ ನನ್ನ ಮನೆಯ ಹತ್ತಿರ ಇರುವ ಸ್ಥಳ ಆಗಿರುತ್ತದೆ. ನಾನು ಆ ಜಾಗದಲ್ಲಿ ಓಡಾಡುವ ಸ್ಥಳ ಆಗಿರುತ್ತದೆ. ದಿಃ 22.09.2022 ರಂದು ನಾನು ಪೊಲೀಸ್ ಠಾಣೆಗೆ ಬೆಳಿಗ್ಗೆ 10.00 ಗಂಟೆಗೆ ನನ್ನ ಮನೆಯಿಂದ ಹೋಗಿರುತ್ತೇನೆ. ಚಾಸಾ.6 ಪೊಲೀಸ್ ಠಾಣೆಗೆ ನಾನು ಠಾಣೆಗೆ ಹೋಗುವ ಮೊದಲು ಅಥವಾ ನಂತರ ಬಂದಿದ್ದರೋ ನನಗೆ ನೆನಪಿಲ್ಲ. ನಾನು ಮತ್ತು ಚಾಸಾ.6 ರವರು ಆ ದಿನ ಕದ್ರಿ ಪಾರ್ಕ್ ನಲ್ಲಿ ಮೊದಲು ಭೇಟಿಯಾಗಿಲ್ಲ. ಅಲ್ಲಿಂದ ನಾವುಗಳು ಒಟ್ಟಾಗಿ ಠಾಣೆಗೆ ಹೋಗಿರುವುದಿಲ್ಲ. ನಾನು ಆ ದಿನ ಕದ್ರಿ ಪಾರ್ಕ್ ಬಳಿ ಇರಲಿಲ್ಲ ಮತ್ತು ಕದ್ರಿ ಪೊಲೀಸ್ ಠಾಣೆಯ ಸುರೇಶ್ ಎಂಬುವವರನ್ನು ಭೇಟಿ ಯಾಗಿಲ್ಲ. ನಾನು ಪೊಲೀಸರಿಗೆ ನೀಡಿದ ಹೇಳಿಕೆಯಲ್ಲಿ ನಾನು ಆ ದಿನ ಕದ್ರಿ ಪಾರ್ಕ್ ಬಳಿ ಇದ್ದೆ, ಸುರೇಶ್ ಎಂಬ ಪೊಲೀಸ್ ನನ್ನನ್ನು ಕದ್ರಿ ಠಾಣೆಗೆ ಬರಲು ಹೇಳಿದರು ಹಾಗೂ ಕದ್ರಿ ಪೊಲೀಸ್ ಠಾಣೆಯ ಸರಕಳ್ಳತನ ಪ್ರಕರಣದಲ್ಲಿ ಆರೋಪಿಗಳನ್ನು ದಸ್ತಗಿರಿ ಮಾಡಿದ್ದೇವೆ ಮತ್ತು ನನ್ನನ್ನು ಪಂಚನಾಮೆಗೆ ಕರೆದಿದ್ದು, ನಾನು ಅದಕ್ಕೆ ಒಪ್ಪಿಕೊಂಡು ಠಾಣೆಗೆ ಹೋಗಿರುತ್ತೇನೆ ಎಂಬ ಹೇಳಿಕೆಯನ್ನು ತನಿಖಾಧಿಕಾರಿಗೆ ನೀಡಿಲ್ಲ. ನನಗೆ ದಿಃ 20.09.2022 ರಂದು ಪೊಲೀಸರು ಠಾಣೆಗೆ ಯಾವ ದಿನಾಂಕ ಮತ್ತು ಎಷ್ಟು ಗಂಟೆಗೆ ಬರಬೇಕೆಂದು ಫೋನ್ ಮುಖಾಂತರ ತಿಳಿಸಿರುತ್ತಾರೆ.

2. ನಿ.ಪಿ.19 ರಿಂದ 20 ದಾಖಲೆಗಳಲ್ಲಿ ನಮೂದಾಗಿರುವ ಸ್ಥಳ ಚಾಸಾ.1 ರವರ ಮನೆ ಬಳಿ ಇದೆ. ದಿಃ 22.09.2022 ರಂದು ನಿ.ಪಿ.17 ರಿಂದ 20 ಪಂಚನಾಮೆ ಮಾಡಿದ ಸ್ಥಳಗಳಲ್ಲಿ ಚಾಸಾ.1 ರವರು ಇರಲಿಲ್ಲ. ನಿ.ಪಿ.21 ರಲ್ಲಿ ಕಾಣುವ ಒಬ್ಬ ಆರೋಪಿತನಿಗೆ ಮತ್ತು ನಿ.ಪಿ.22 ಮತ್ತು 23 ರಲ್ಲಿ ಕಾಣುವ 3 ಆರೋಪಿತರ ಮುಖಕ್ಕೆ ಮಾಸ್ಕ್ ಹಾಕಿಲ್ಲ ಎಂದರೆ ಸರಿ. ನಿಪಿ.17 ರಿಂದ 20 ಪಂಚನಾಮೆ ಮಾಡುವ ಕಾಲಕ್ಕೆ ಪೊಲೀಸರು ನನಗೆ ಆರೋಪಿತರ ಹೆಸರುಗಳನ್ನು ತಿಳಿಸಿದ್ದರು. ಚಾಸಾ.6 ರವರಿಗೆ ಚಾಸಾ.1 ಮತ್ತು 2 ರವರು ಸಂಬಂಧಿಕರಾಗಿರುತ್ತಾರೆ. ಚಾಸಾ.1 ಮತ್ತು 2 ಈ ದಿನ ನ್ಯಾಯಾಲಯಕ್ಕೆ ಬಂದಿರುತ್ತಾರೆ. ಚಾಸಾ.6 ರವರು ಚಾಸಾ.1 ಮತ್ತು 2 ರವರ ಸಂಬಂಧಿಕರು ಎಂಬ ವಿಚಾರ ಪೊಲೀಸರಿಗೆ ಗೊತ್ತಿತ್ತೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ.

3. ನಿ.ಪಿ.17 ರಿಂದ 20 ನಾನು ಮತ್ತು ಚಾಸಾ.6 ಕದ್ರಿ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ನಿ.ಪಿ.17 ರಿಂದ 20 ಪಂಚನಾಮೆಗಳನ್ನು ಠಾಣೆಯಲ್ಲಿ ಪೊಲೀಸರು ಬರೆದಿರುತ್ತಾರೆ ಎಂದರೆ ಸರಿಯಲ್ಲ. ನಾನು ಮತ್ತು ಚಾಸಾ.6 ನಿ.ಪಿ.17 ರಿಂದ 20 ಪಂಚನಾಮೆಗಳಲ್ಲಿ ನಮೂದು ಮಾಡಿರುವ ಸ್ಥಳಗಳಿಗೆ ಹೋಗಿಲ್ಲ ಮತ್ತು ಆರೋಪಿತರು ಅಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಮು.ಮಾ 1 ರೇನ್ ಕೋಟ್ ಅದು ಪೋಲೀಸ್ ಠಾಣೆಯಲ್ಲಿಯೇ ಇತ್ತು ಎಂದರೆ ಸರಿಯಲ್ಲ. ಮು.ಮಾ 1 ಈ ಪ್ರಕರಣಕ್ಕೆ ಸಂಬಂಧಿಸಿದ್ದು ಎಂದು ನನಗೆ ಪೊಲೀಸರು ತಿಳಿಸಿರುತ್ತಾರೆ.

ಪಾಟೀಸವಾಲು: **3ನೇ** ಆರೋಪಿ ಪರ **KPB** ವಕೀಲರಿಂದ:

3ನೇ ಆರೋಪಿ ಪರ ವಕೀಲರು 1 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀಸವಾಲನ್ನು ಅಳವಡಿಸಿಕೊಳ್ಳುತ್ತೇನೆ ಎಂದು ನುಡಿಯುತ್ತಾರೆ.

ಮರುವಿಚಾರಣೆ: ಇಲ್ಲ

ನ್ಯಾಯಾಲಯದ ಹೇಳಿಕೆಯ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇದೆ

2 ನೇ ಹೆ.ನ್ಯಾ.ಮಂಗಳೂರು.